2-72-(46)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಹರೀಶ್ ಕುಮಾರ್ ಇವರು ನಿಯಮ 72 ರಡಿ ಮಂಡಿಸಿರುವ ಸೂಚನಾ ಪತ್ರಕ್ಕೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಹೇಳಿಕೆ.**

ವಿಷಯ : ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕು ಗೋಣಿ ತುಮಕೂರು ಗ್ರಾಮ ಪಂಚಾಯತಿಯಲ್ಲಿ ನರೇಗಾ ಯೋಜನೆಯಡಿ, ಕಾಮಗಾರಿಗಳನ್ನು ಕೆಲವು ಮಾಜಿ ಸದಸ್ಯರು ಹಾಗೂ ಅಧ್ಯಕ್ಷರು ಮಾನವ ಶ್ರಮಕ್ಕೆ ಬದಲಾಗಿ ತಾವೇ ಯಂತ್ರಗಳ ಹಾಗೂ ಗುತ್ತಿಗೆ ಮೇಲೆ ನಿರ್ವಹಿಸಿ ಮುಗ್ಧ ರೈತರ ಬ್ಯಾಂಕ್ ಖಾತೆಗಳಿಗೆ ಹಣ ಹಾಕಿಸಿ, ನಂತರ ಅದನ್ನು ಅವರ ಮೂಲಕ ತಾವೆ ಪಡೆದುಕೊಂಡು ಕೋಟ್ಯಾಂತರ ರೂ ವಂಚಿಸಿದ್ದು, ಈ ಬಗ್ಗೆ ಇಲಾಖೆ ಉನ್ನತಾಧಿಕಾರಿಗಳಿಂದ ತನಿಖೆ ಮಾಡಿಸಿ ಸೂಕ್ತ ಕ್ರಮ ಕೈಗೊಳ್ಳಲು ಹಾಗೂ ಸರ್ಕಾರದ ನೀತಿ-ನಿಯಮಗಳನ್ನೇ ಬುಡಮೇಲು ಮಾಡಿ ವಂಚಿಸಿ, ಕೋಟ್ಯಾಂತರ ರೂ ಗಳಷ್ಟು ಹಾಳು ಮಾಡುತ್ತಿರುವುದನ್ನು ತಡೆಯಲು ಸರ್ಕಾರ ಕ್ರಮ ಕೈಗೊಳ್ಳುವ ಬಗ್ಗೆ.

ಉತ್ತರ: ಮಹಾತ್ಮ ಗಾಂಧಿ ನರೇಗಾ ಯೋಜನೆಯು ಕೂಲಿ ಬೇಡಿಕೆಯಾಧಾರಿತ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಯೋಗದೊಂದಿಗೆ ಗ್ರಾಮೀಣ ಕುಟುಂಬಗಳಿಗೆ 1 ಆರ್ಥಿಕ ವರ್ಷದಲ್ಲಿ 100 ದಿನಗಳ ಅಕುಶಲ ಕೂಲಿ ನೀಡುವ ಯೋಜನೆಯಾಗಿದ್ದು, ಕೂಲಿಕಾರರು ನಿರ್ವಹಿಸಿದ ಕೂಲಿ ಮೊತ್ತವನ್ನು ನೇರವಾಗಿ E-FMS ಮೂಲಕ (DBT) ಕೂಲಿಕಾರರ ಖಾತೆಗೆ ಸರ್ಕಾರದ ನಿಯಮ ಮತ್ತು ಮಾರ್ಗಸೂಚಿಯಂತೆ ವರ್ಗಾವಣೆ ಮಾಡಲಾಗುತ್ತದೆ ಮತ್ತು ಮಾಡಲಾದ ವೆಚ್ಚವನ್ನು ಸಾಮಾಜಿಕ ಪರಿಶೋಧನೆಗೆ ಒಳಪಡಿಸಲಾಗುತ್ತಿದೆ.

ಸಾಮಾಜಿಕ ಪರಿಶೋಧನೆ ತಂಡವು ಸ್ವತಂತ್ರ ತಂಡವಾಗಿದ್ದು, ಸಾಮಾಜಿಕ ನಿರ್ದೇಶನಾಲಯವು ನೀಡುವ ಮಾರ್ಗಸೂಚಿಯಂತೆ ಕಾರ್ಯನಿರ್ವಹಿಸುತ್ತದೆ. ಈ ತಂಡದ ಸದಸ್ಯರು ನರೇಗಾ ಯೋಜನೆಯಡಿಯಲ್ಲಿ ಮಾಡಿರುವ ವೆಚ್ಚಗಳಿಗೆ ಸಂಬಂಧಿಸಿದ ಕಚೇರಿಯಲ್ಲಿ ನಿರ್ವಹಿಸಿರುವ ದಾಖಲೆಗಳೂ, ಕಾಮಗಾರಿಗಳ ಅಳತೆ ಮತ್ತು ಗುಣಮಟ್ಟ, ಪ್ರತಿಯೊಬ್ಬ ಕೂಲಿಕಾರನು ಕೂಲಿ ಮಾಡಿರುವ ಬಗ್ಗೆ, ಖಾತ್ರಿ, ಕೂಲಿಗಾರರಿಗೆ ನೀಡಲಾದ ಸವಲತ್ತುಗಳು ಮತ್ತು ಕೂಲಿಕಾರರಿಗೆ ಕೂಲಿ ತಲುಪಿರುವ ಬಗ್ಗೆ, ಮನೆ-ಮನೆ ಭೇಟಿ ನೀಡಿ ವರದಿಯನ್ನು ಸಿದ್ಧಪಡಿಸಿ, ಸಾಮಾಜಿಕ ಪರಿಶೋಧನಾ ಗ್ರಾಮಸಭೆಗೆ ಮಂಡಿಸಿ, ಅಲ್ಲಿ ಅನುಮೋದನೆಯನ್ನು ಪಡೆಯಲಾಗುತ್ತದೆ. ಸಾಮಾಜಿಕ ಪರಿಶೋಧನಾ ಗ್ರಾಮ ಸಭೆಯು ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯದಿಂದ ನಿಯೋಜಿಸಲ್ಪಟ್ಟ ತಾಲ್ಲೂಕು ಮಟ್ಟದ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಹಾಜರಿರುವ ಗ್ರಾಮಸ್ಥರು /ಕೂಲಿಕಾರರ ಸಮಕ್ಷಮದಲ್ಲಿ ಚರ್ಚೆಯನ್ನು ನಡೆಸಿ, ಬಹುಮತದ ಆಧಾರದ ಮೇಲೆ ನಿರ್ಣಯವನ್ನು ಕೈಗೊಳ್ಳಲಾಗುತ್ತದೆ.

ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕು ಗೋಣಿ ತುಮಕೂರು ಗ್ರಾಮ ಪಂಚಾಯತಿಯಲ್ಲಿ 2017-18 ರಿಂದ 2019-20 ರವರೆಗೆ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿಯಲ್ಲಿ ಮಾಡಿರುವ ವೆಚ್ಚಗಳನ್ನು ಸಾಮಾಜಿಕ ಪರಿಶೋಧನೆಗೆ ಒಳಪಡಿಸಲಾಗಿರುತ್ತದೆ. ಈ ಕೆಳಕಂಡ ದಿನಾಂಕಗಳಂದು ಸಾಮಾಜಿಕ ಪರಿಶೋಧನೆ ಗ್ರಾಮ ಸಭೆಗಳು ಮಾಹಾತ್ಮ ಗಾಂಧಿ ನರೇಗಾದ ಮಾರ್ಗಸೂಚಿಯಂತೆ ನಡೆದಿದ್ದು, ಸಾಮಾಜಿಕ ಪರಿಶೋಧನಾ ತಂಡದ ಸದಸ್ಯರು ಕೂಲಿಕಾರರನ್ನು ಭೇಟಿ ಮಾಡಿ ವರದಿಯನ್ನು ಸಭೆಗೆ ಮಂಡಿಸಿ ಅನುಮೋದನೆ ಪಡೆದ ಗ್ರಾಮ ಸಭೆ ನಡವಳಿಯಲ್ಲಿ ಯಂತ್ರಗಳ ಬಳಕೆ ಮತ್ತು ಅಮಾಯಕ ರೈತರಿಗೆ ವಂಚನೆ ಮಾಡಿರುವ ಬಗ್ಗೆ ಯಾವುದೇ ಪ್ರಕರಣ ವರದಿ ಆಗಿರುವುದಿಲ್ಲ.

| ಕ್ರ.ಸಂ. | ಆರ್ಥಿಕ ವರ್ಷ | ಗ್ರಾಮ ಸಭೆ ದಿನಾಂಕ |
|---|---|---|
| 1 | 2017-18 | 28-08-2017, 23-12-2017 |
| 2 | 2018-19 | 18-07-2018, 15-12-2018 |
| 3 | 2019-20 | 16-07-2019, 03-01-2020 |
| 4 | 2020-21 | 27-08-2020 |

(ಕೆ.ಎಸ್. ಈಶ್ವರಪ್ಪ)

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

**ಕೆ.ಎಸ್. ಈಶ್ವರಪ್ಪ**
**ಗ್ರಾಮೀಣಾಭಿವೃದ್ಧಿ ಮತ್ತು**
ಪಂಚಾಯತ್ ರಾಜ್ ಸಚಿವರು

ಸಂಖ್ಯೆ: ಗ್ರಾಅಪ 741 ಗ್ರಾಪಂಅ 2020.